ಮಲ್ಪೆ ಬಂದರಿನ ಎರಡನೇ ಹಂತದ ಕಾಮಗಾರಿ ಯೋಜನೆ.

೨೯೦೭(೩೬೭೪)

ಶ್ರೀ ಜಯಪ್ರಕಾಶ್ ಹಗಡೆ ಕೆ.(ಬ್ರಹ್ಮಾವರ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಮಲ್ಪೆ ಬಂದರಿನ ೨ನೇ ಹಂತದ ಕಾಮಗಾರಿಯು ಯೋಜನೆಯನ್ವಯ ಎಂದು ಪ್ರಾರಂಭಗೊಳ್ಳಬೇಕಾಗಿತ್ತು. ಅದನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ ಎಷ್ಟು?

ಆ) ನಿಗದಿತ ಯೋಜನೆಯನ್ವಯ ಆದು ವಿಳಂಬವಾಗಲು ಕಾರಣಗಳೇನು? ಯೋಜನೆಯ ಕಾರ್ಯಗತಕ್ಕೆ ಬೇಕಾಗುವ ಹಣ ಮಂಜೂರಾಗಿದೆಯೇ? (ವಿವರ ನೀಡುವುದು)

ಇ) ಬಂದರಿನ ೨ನೇ ಹಂತದ ಕಾಮಗಾರಿಯಲ್ಲಿ ಡ್ರಜಿಂಗ್ ಯಾವ ಪ್ರಮಾಣದಲ್ಲಿ ಆಗಿದೆ ಡ್ರಡ್ಜ ಮಾಡಿದ ಹೂಳನ್ನು ಮತ್ತೆ ಅಳಿವೆ ಬಾಗಿಲು ಸಮುದ್ರ ಪ್ರದೇಶದಲ್ಲಿ ಬಿಡುತ್ತಿರುವುದು ನಿಜವೆ?

ಈ) ಹೀಗೆ ಹೂಳನ್ನು ಅಲ್ಲಿಯೇ ಬಿಡುವುದು ನಿಜವಾಗಿದ್ದಲ್ಲಿ ಹೂಳು ಅಳಿವೆ ಬಾಗಿಲಲ್ಲಿ ತುಂಬಿಕೊಂಡು ಮತ್ತೆ ಅನಾನುಕೂಲಸ್ಥಿತಿ ಉರ್ಪಡುವುದಿಲ್ಲವೆ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ದಿನಾಂಕ: ೦೨-೦೬-೧೯೯೭ರಂದು ಭಾರತ ಸರ್ಕಾರದ ಮಂಜೂರಾತಿಯನ್ವಯ ಯೋಜನೆಯು ದಿನಾಂಕ ೧೯-೮-೨೦೦೧ಕ್ಕೆ ಮೊದಲು ಪೂರ್ಣಗೊಳ್ಳಬೇಕಾಗಿದೆ.

ಆ) ಹೂಳೆತ್ತುವ ಕೆಲಸ ತಡವಾದ್ದರಿಂದ ಯೋಜನೆಯನ್ನು ಪೂರ್ಣಗೊಳಿಸುವುದು ವಿಳಂಬವಾಗಿದೆ.

ಹೌದು. ವಿವರಣೆ ಕೆಳಗಿನಂತಿದೆ.

ವರ್ಷ	ಮಂಜೂರಾದ ಅನುದಾನ
	(ರೂ. ಲಕ್ಷಗಳಲ್ಲಿ)
೧೯೯೭-೯೮	೩೦೦
೧೯೯೮-೯೯	೬೦೦
೧೯೯೯-೨೦೦೦	೪೫೦
೨೦೦೦-೨೦೦೧	೧೬೫
೨೦೦೧-೨೦೦೨	೧೫೦

ಇ) ಈವರೆಗೆ ೧,೦೦,೦೦೦-೦೦ ಘ.ಮೀ. ನಷ್ಟು ಹೂಳೆತ್ತಲಾಗಿದೆ.

ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಪಶು ಆಸ್ಪತ್ರೆ ಕಟ್ಟಡಗಳ ಕುರಿತು.

೨೯೦೮(೩೩೦೮)

ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಪಶು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡವಿದೆ; ಇನ್ನು ಎಷ್ಟು ಆಸ್ಪತ್ರೆಗಳಿಗೆ ಕಟ್ಟಡ ಬೇಕಾಗಿದೆ; ಜಿಲ್ಲಾ ಮತ್ತು ತಾಲ್ಲೂಕುವಾರು ವಿವರ ತಿಳಿಸಿ?

ಆ) ಈ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಕಳೆದ ವರ್ಷ ಎಷ್ಟು ಹೊಸ ಕಟ್ಟಡಗಳನ್ನು ಮಂಜೂರು ಮಾಡಲಾಗಿದೆ?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ೨೯೪. ಇವುಗಳಲ್ಲಿ ೨೭೪ ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡವಿದೆ.